
ಕೆ.ವಿ. ಗೋವಿಂದಾಚಾರಿ, ಮೈಸೂರು
ಬಹುತೇಕ ದೇಗುಲಗಳಲ್ಲಿ ನಿತ್ಯಪೂಜೆ ಉಂಟು. ಭಗವಾನ್ ಬಾಹುಬಲಿಗೇಕಿಲ್ಲ?




ಸರ್ವವನ್ನೂ ತ್ಯಜಿಸಿದವನಿಗೆ ಅರ್ಪಣೆಯ ಋಣವನ್ನೂ ಅಂಟಿಸಬಾರದೆಂದು.

ಎಂ.ಸಿ. ಧನ್ಯತಾ, ಬೆಂಗಳೂರು
ಗೊಂಬೆಗೂ, ಕೈಗೊಂಬೆಗೂ ಏನು ವ್ಯತ್ಯಾಸ?
ಕೆಲವೊಮ್ಮೆಯಂತೂ ಗೊಂಬೆ ಪತಿ; ಕೈಗೊಂಬೆ ರಾಷ್ಟ್ರಪತಿ.

ಬಿ.ಆರ್. ಉಷಾ, ಬೆಂಗಳೂರು
ಅಮ್ಮ ಮತ್ತು ಹೆಂಡತಿಯ ಜೊತೆ ಬಾಳುವ ಪತಿಯ ಗತಿ?
ಮೇಲೆ ರಿಮ್, ಕೆಳಗೆ ಬಂಡೆಯ ನಡುವೆ ಸಿಲುಕಿದ ಪಂಕ್ಚರ್ ಆದ ಟ್ಯೂಬಿನ ಸ್ಥಿತಿ.

ಜಗದೀಶ ಬಿ. ಹೊಸೂರು, ಮೈಸೂರು
ಕತ್ತೆ, ನಾಯಿ, ಗೂಬೆ ಎಂದು ಬಯ್ಯುತ್ತಾರಲ್ಲ, ಆ ಪ್ರಾಣಿಗಳಲ್ಲಿರುವ ದೋಷವೇನು?



'ಯಾರ್ ಬಗ್ಗೆ ಮಾತಾಡ್ತಿದ್ದೀಯಾ?' ಎಂದು ನರನ ವಿರುದ್ಧ ತಿರುಗಿ ಬೀಳಲು ಆಗದಿರುವುದು.

ಕೆ.ವಿ. ಮಂಜುನಾಥ್, ಕೆ.ಟಿ.ಹಳ್ಳಿ
ಬಾಣಸಿಗರು ಅವಿದ್ಯಾವಂತರಾದರೂ ಸಿಹಿಯಾದ ಅಡುಗೆ ಮಾಡುತ್ತಾರಲ್ಲ?
'ರಸ'ಪಾಕದ 'ಸಂದೇಶ' ಸಾರುವ ಆ'ಮೋದಕ'ರ ಪಾಕಶಾಲೆಯಲ್ಲಿ ಕಲಿತಿರುತ್ತಾರಲ್ಲ.

ಬಿ. ಬಸವರಾಜ್, ಹರಿಹರ
ಮಗಳ ವಯಸ್ಸಿನವರನ್ನು ಕೆಲವು ಗಂಡಸರು 'ಆಂಟಿ' ಅನ್ನುತ್ತಾರಲ್ಲ?
ಬೇಟಿ ಎನ್ನಲು ಮನಸ್ಸಾಗದು; ಬ್ಯೂಟಿ ಎಂದರೆ ಅವಳೊಪ್ಪಳು. ಇದು ವಯಾ ಮೀಡಿಯಾ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಔಷಧಿ ತೆಗೆದುಕೊಳ್ಳುತ್ತಿದ್ದರೂ ಕಾಯಿಲೆ ಕಡಿಮೆಯಾಗದೆ ಆಯಸ್ಸಷ್ಟೇ ಕಡಿಮೆಯಾಗುತ್ತಿದೆಯಲ್ಲ?
ಲಿವರ್(ಜೀವಿ) ಪಥ್ಯದ್ವೇಷಿಯಂತಲ್ಲ! ಲಿವರ್ ಸರಿಯಿದ್ದರೆ ಲಿವಿಂಗ್ ದೀರ್ಘ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ತಲೆ ದಂಡ ಕೊಟ್ಟರೂ ಮಾಮೂಲಿ ಜಾಗದಲ್ಲೇ ಇರುತ್ತದಲ್ಲಾ?
ತಲೆದಂಡ ಕೊಟ್ಟದ್ದಕ್ಕೆ ತಲೆಯೇ ರಸೀತಿಯಂತೆ. ದಂಡ ಅವರಿಗೆ, ತಲೆ ಇವರಿಗೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ನಾವು ದೇವರಿಗೆ ಮಾಡುವ ಪೂಜೆ ಹೇಗಿರಬೇಕು?
ದೇವನಿಗೆ ಕಳುಹಿಸಿದ ಇನ್‌ವಾಯ್ಸ್‌ನಂತಿರದೆ ತನ್ನದೇ ಇನ್ನರ್ ವಾಯ್ಸ್ ಕೇಳಿಸುವಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಶವದ ಮೈಮೇಲೆ ಬಿಳಿ ಬಟ್ಟೆ ಹೊದಿಸುವ ಉದ್ದೇಶ?
ಶವದ ಬಿಳಿಚಿಕೊಂಡ ಮುಖಕ್ಕೆ ಮ್ಯಾಚ್ ಆಗಲು.

ಬೂಕನಕೆರೆ ವಿಜೇಂದ್ರ, ಮೈಸೂರು
ಭೂತ ಎಂದರೆ ಯಾವುದು? ಪಿಶಾಚಿ ಎಂದರೆ ಯಾವುದು?
ಭೂತ ಬಾಸ್‌ಗಳಂತೆ ಅತೃಪ್ತ ಆತ್ಮ, ಪಿಶಾಚಿ ರಕ್ತಪಿಪಾಸು ಟೆರರಿಸ್ಟು.

ಪಿ. ಜಯವಂತ ಪೈ, ಕುಂದಾಪುರ
ಮಕ್ಕಳಿಲ್ಲದಿದ್ದರೂ, ಕೋಟಿಗಟ್ಟಲೆ ಇದ್ದರೂ, ಕೆಲವರು ಯಾರಿಗೂ ಏನನ್ನೂ ಕೊಡರಲ್ಲ?
ಕೊಡುತ್ತಾರೆ; ವಾಚ್‌ಮನ್‌ಗೆ ಸಂಬಳ, ಲಾಕರ್‌ನ ಬಾಡಿಗೆ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ಪದಬಂಧಕ್ಕೂ ಜೀವನಬಂಧಕ್ಕೂ ಇರುವ ವ್ಯತ್ಯಾಸವೇನು?
ಪದಬಂಧ 'ಮೇಲಿನಿಂದ ಕೆಳಕ್ಕೆ' ಸಮ್ಮತ; ಜೀವನಬಂಧ ಕೆಳಗಿನಿಂದ ಮೇಲಕ್ಕೆ ಸೂಕ್ತ.


## ಬಹುಮಾನಿತ ಪ್ರಶ್ನೆ

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ನಾವು ಎಷ್ಟೇ ಬೆಳ್ಳಗಿದ್ದರೂ ನಮ್ಮ ನೆರಳು ಕಪ್ಪು. ಏಕೆ?
ಬೆಳಕಿನ ಬಿಳಿಯ ಮುಂದೆ ನಾವು ಕಪ್ಪು ಎಂದು ತೋರಿಸಲು.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಟಿಷ್ಯೂ ಪೇಪರ್‌ಗೂ, ಬಾಂಡ್ ಪೇಪರ್‌ಗೂ ಇರುವ ವ್ಯತ್ಯಾಸವೇನು?
ಒರೆಸಲೊಂದು, ಒರೆಯಲೊಂದು.

ಮಲ್ಲಿಕಾರ್ಜುನ, ಸುರಧೇನುಪುರ
ತಾಮ್ರದ ಕಾಸು ತಾಯಿ–ಮಕ್ಕಳ ಅಗಲಿಸಿತು. ಕಾಗದದ ಕರೆನ್ಸಿ?
ಕರುಳ ಸಂಬಂಧವನ್ನು ಕರಪ್ಟಿಸಿತು.

ಆರ್. ಮಧುಸೂದನ್, ಹಾಸನ
'ಹಣ' ಪುಲ್ಲಿಂಗವೋ, ಸ್ತ್ರೀಲಿಂಗವೋ?



ತಂದು ಒಳಗೇ ಕೂಡಿಹಾಕುವುದರಿಂದ ಶೋಷಿತ ಸ್ತ್ರೀಲಿಂಗ.

ಅನಸೂಯಾ ತ್ರಿವಿಕ್ರಮ್, ಕೇದಿಗೆಮನೆ
ಎಲ್ಲಾ ಪ್ರಶ್ನೆಗಳನ್ನು ಕೇಳಿ ಮುಗಿದ ಮೇಲೆ ಉಳಿಯುವ ಕೊನೆಯ ಪ್ರಶ್ನೆ ಯಾವುದು?
'ಇನ್ನೇನು ಕೇಳಬಹುದು?' ಎಂಬ ಸ್ವಗತ.

ಅಮರಯ್ಯಾ ಪತ್ರಿಮಠ, ಸುರಪುರ
ಬದುಕು ಅರ್ಥಪೂರ್ಣವಾಗಬೇಕಾದರೆ ಏನು ಮಾಡಬೇಕು?
ಚಿಲ್ಲರೆ ವಿಷಯಗಳಿಂದ ದೂರವಿರಬೇಕು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಸಾಲ ಮನ್ನಾಗೂ, ತಮನ್ನಾಗೂ ವ್ಯತ್ಯಾಸ?
ಸಾಲ ಮನ್ನಾ ಅನೇಕರ ತಮನ್ನಾ(ಬಯಕೆ); ತಮನ್ನಾ ಸಾಬೂನಿನವರಿಗೆ ಸಿಕ್ಕ ಬೂನ್(ವರ).

■ **ರಾಮ್**